ರಸ್ತೆಯ ಎರಡೂ ಬದಿ ಕಾಫಿ ತೋಟ. ಎತ್ತರೆತ್ತರ ಮರಗಳು. ರಾಮಚಂದ್ರ ಮೈಯೆಲ್ಲ ಕಣ್ಣಾಗಿ ಕಾರು ಚಲಾಯಿಸುತ್ತಿದ್ದ. ಅಪರಿಚಿತ ವ್ಯಕ್ತಿಯ ಉಪಸ್ಥಿತಿಯಲ್ಲಿ ಕುಸುಮನ ಜೀವ ಹಿಡಿಯಾಗಿದ್ದುದನ್ನು ಅವನು ಗಮನಿಸಿದ. ಅವಳು ತನ್ನ ಕಿಟಕಿಯೆಡೆಗೆ ಪೂರಾ ಒತ್ತರಿಸಿಕೊಂಡು, ಹಾಗೆ ಕೂತಲ್ಲಿಂದಲೇ ಗಂಡನ ಮುಖವನ್ನು ದುರುದುರು ನೋಡುತ್ತಿದ್ದಳು. ತನಗೆ ತಿಳಿದಿದ್ದ ಎಲ್ಲ ಕೆಟ್ಟ ಬೈಗುಳಗಳೂ ಅವಳ ಮನಸ್ಸನ್ನು ಹಾದು ಹೋಗುತ್ತಿದ್ದವು.

ಏರು ರಸ್ತೆಯಲ್ಲಿ ಕಾರು ಮುಕ್ಕುರಿದು ಹತ್ತುತ್ತಿತ್ತು. ಕಾಫಿ ತೋಟದಿಂದ ಸುತ್ತುವರಿದ ಬೆಟ್ಟದ ದಿಣ್ಣೆಯನ್ನು ಏರಿ ಆಚೆಗೆ ಇವರು ಇಳಿಯಬೇಕಿತ್ತು. ಸುತ್ತ ಎತ್ತ ನೋಡಿದರೂ ಸಣ್ಣ ಗುಡ್ಡಗಳು. ಸಂಜೆಯ ಮೋಡಗಳು ಆ ಗುಡ್ಡಗಳಿಗೇ ಮುತ್ತು ಕೊಟ್ಟಂತೆ ಮುತ್ತಿಕೊಂಡಿದ್ದವು. ಸಂಜೆ ಏರುತ್ತಿದ್ದಂತೆ ಅಲ್ಲೆಲ್ಲ ಮಂಜಿನಂತ ಮಸುಕು ಆವರಿಸತೊಡಗಿತು. ಸಾಮಾನ್ಯ ಪರಿಸ್ಥಿತಿಯಲ್ಲಾಗಿದ್ದಿದ್ದರೆ ಅವರಿಬ್ಬರೂ ಈ ಸೌಂದರ್ಯವನ್ನು ಅನುಭವಿಸುವ ರೀತಿ ಬೇರೆಯೇ ಇತ್ತು. ಇದೊಂಥರ ವಿಷಮ ಸ್ಥಿತಿ. ಅವನಿಗೆ ಯಾತಕ್ಕಾದರೂ ಈ ರಸ್ತೆಯಲ್ಲಿ ಬಂದೆನೋ ಅನ್ನಿಸಿಬಿಟ್ಟಿತು. ಅಗಲಿದ ಗೆಳೆಯನ ಕೊನೆಯ ಮಾತಿನ ಆಸೆ ಮತ್ತು ಸ್ವತಃ ಇವನಿಗೇ ಸದಾ ಹೊಸಹೊಸತನ್ನು ಮೈಮೇಲೆ ಎಳೆದುಕೊಂಡು ಅನುಭವಿಸುವ ಖಯಾಲಿ ಎರಡೂ ಸಮನಾಗಿ ಬೆರೆತು ಹೀಗಾಗಿತ್ತು.

ಜೀವವನ್ನು ಸೂರೆಗೊಳ್ಳುವಂತಿದ್ದ ಮಬ್ಬು, ಸುತ್ತಲಿನ ದಟ್ಟಕಾಡು, ಚಿತ್ರವಿಚಿತ್ರ ಕೀಟಗಳ ಸದ್ದು... ಯಾವುದನ್ನೂ ಆ ಪರಿಸ್ಥಿತಿಯಲ್ಲಿ ಸುಖಿಸುವಂತಿರಲಿಲ್ಲ. ರಾಮಚಂದ್ರ ಕಾರಿನ ಕನ್ನಡಿಯನ್ನು ಹಿಂದೆ ಕುಳಿತಿದ್ದ ಅಪರಿಚಿತ ವ್ಯಕ್ತಿಯ ಕಡೆಗೆ ತಿರುಗಿಸಿಕೊಂಡ. ಆ ವ್ಯಕ್ತಿ ತನ್ನ ಪಾಡಿಗೆ ತಾನು ಕಿಟಕಿಯಾಚೆ ನೋಡುತ್ತಿದ್ದ. ಇವನೇನಾದರೂ ಕಳ್ಳನೋ, ದರೋಡೆಕೋರನ ಗುಂಪಿನವನೋ ಆಗಿದ್ದರೆ ಎನ್ನುವ ಸಂಶಯದ ಸುಳಿಯೊಂದು ರಾಮಚಂದ್ರನ ಮನಸ್ಸಿನಲ್ಲಿ ಹಾದುಹೋಯಿತು. ಅವನು ಕನ್ನಡಿಯಲ್ಲಿ ಆ ಇನ್ನೊಬ್ಬ ವ್ಯಕ್ತಿಯನ್ನೇ ದಿಟ್ಟಿಸಿ ನೋಡಲು ಯತ್ನಿಸಿದ. ಕುಳ್ಳಗಿನ ಆಕೃತಿ, ಕಪ್ಪು ಮೈ, ಕೆದರಿದ ತಲೆಗೂದಲು, ಗಲೀಜು ಶರಟು, ಪ್ಯಾಂಟು – ಎಲ್ಲವೂ ರಾಮಚಂದ್ರನ ಅನುಮಾನವನ್ನು ಪುಷ್ಟೀಕರಿಸುವಂತಿದ್ದವು. ಮೇಲಾಗಿ, ತನ್ನನ್ನು ಒಂದು ಮಾತು ಕೇಳದೆಯೇ ಬಂದು ಕಾರಿನಲ್ಲಿ ಕುಳಿತವನು ಅಲ್ಲಿಂದ ಒಂದೇ ಒಂದು ಮಾತನ್ನೂ ಆಡಿಲ್ಲ. ಕತ್ತನ್ನು ಎತ್ತರಿಸಿ ರಾಮಚಂದ್ರ ತನ್ನ ಮನಸ್ಸಿನ ಅಷ್ಟೂ ಶಕ್ತಿಯನ್ನು ಕಣ್ಣಿಗೆ ತಂದುಕೊಂಡು ಕನ್ನಡಿಯಲ್ಲಿ ಕಾಣುತ್ತಿದ್ದಷ್ಟೂ ವ್ಯಕ್ತಿಯ ದೇಹದ ಮೇಲೆ ಕಣ್ಣಾಡಿಸಿ ಅವನ ಬಳಿ ಏನಾದರೂ ಆಯುಧಗಳಿರಬಹುದೇ ನೋಡಿದ. ಏನೂ ಕಾಣಲಿಲ್ಲ. ವ್ಯಕ್ತಿಯು ಇನ್ನೂ ಕಿಟಕಿಯಿಂದ ಹೊರಗೇ ನೋಡುತ್ತಿದ್ದ.



ರಾಮಚಂದ್ರನಿಗೆ ತನ್ನ ಮನಸ್ಸಿನ ಕಸಿವಿಸಿ ಬಗ್ಗೆ ತನಗೇ ನಾಚಿಕೆಯೆನಿಸತೊಡಗಿತು. ಯಾರೋ ಒಬ್ಬ ವ್ಯಕ್ತಿ ನಿಜವಾಗಿ ಲಿಂಗದಹಳ್ಳಿಗೆ ಹೋಗಬೇಕಾಗಿದ್ದಿರಬಹುದು, ಅಷ್ಟಕ್ಕೇ ನಾನು ಏನೇನೋ ಊಹಿಸಿ, ಕಲ್ಪಿಸಿಕೊಳ್ಳಬೇಕೇಕೆ? ಮನುಷ್ಯ ಇನ್ನೊಬ್ಬ ಮನುಷ್ಯನನ್ನು ನಂಬದೆ ಇರುವ ಮಟ್ಟಕ್ಕೆ ಲೋಕ ಬಂದು ನಿಂತಿದೆಯೇ? ಇಷ್ಟು ಚಿಕ್ಕ ವಿಷಯಕ್ಕೆ ನಾನು ಯಾಕೆ ಇಷ್ಟೊಂದು ತಲೆಕೆಡಿಸಿಕೊಳ್ಳುತ್ತಿದ್ದೇನೆ? ನನ್ನೊಳಗೆ ನನಗೇ ತಿಳಿಯದ ಇಂಥ ಇನ್ನೊಬ್ಬ ಮನುಷ್ಯನಿದ್ದಾನೆಯೇ? ನನ್ನ ಆಲೋಚನೆಗೆ ಇಂಥದ್ದೊಂದು ಹೊಸ ಆಯಾಮ ಇದೆಯಲ್ಲ! ಅನ್ನಿಸಿದಾಗ ರಾಮಚಂದ್ರನಿಗೆ ವಿಚಿತ್ರವೆನಿಸಿತಾದರೂ, ಆ ವ್ಯಕ್ತಿಯ ಬಗೆಗಿನ ಭಯ ಪೂರ್ತಿ ಹೋಗಿಲ್ಲ ಅನ್ನುವುದೂ ತನ್ನೊಳಗಿನ ದುಗುಡದಿಂದ ಅನುಭವವಾಯಿತು.

ಕತ್ತಲು ಮುತ್ತುತ್ತಿದ್ದ ರಸ್ತೆಗೆ ಕಾರಿನ ದೀಪದ